



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ಆನವಟ್ಟಿ**
ಪಕ್ಷೇತರ ಅಭ್ಯರ್ಥಿ ಈಶ್ವರಪ್ಪ ಸಭೆ


ಗುರುವಾರ,25ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-64 | ● ಉಚಿತ | ● | ● www.suddisanchaari.in




**ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆ**

## ರಾಜ್ಯದಲ್ಲಿ ಯುವತಿಯರು ಹಾಗೂ ಮಹಿಳೆಯರ ಸುರಕ್ಷತೆ ಬಗ್ಗೆ ಪ್ರಶ್ನೆ ಎದ್ದಿದೆ

ಸುದ್ದಿ ಸಂಚಾರಿ
ಶಿಕಾರಿಪುರ: ರಾಜ್ಯದಲ್ಲಿ ಶಾಲಾ ಕಾಲೇಜು, ಕೆಲಸಕ್ಕೆ ಹೋಗಿ ಬರುವ ಯುವತಿಯರು ಹಾಗೂ ಮಹಿಳೆಯರ ಸುರಕ್ಷತೆ ಬಗ್ಗೆ ಪ್ರಶ್ನೆ ಎದ್ದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಟ್ಟಣದ ಮಂಗಳ ಭವನ ಹಿಂಭಾಗದ ಮೈದಾನದಲ್ಲಿ ಬುಧವಾರ ಬಿಜೆಪಿ ಯುವ ಮೋರ್ಚಾ ತಾಲ್ಲೂಕು ಘಟಕ ಆಯೋಜಿಸಿದ್ದ ಯುವ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯ ಕಾಂಗ್ರೆಸ್ ಸರ್ಕಾರ ದೇಶದ್ರೋಹಿಗಳ ರಕ್ಷಣೆ ಮಾಡುತ್ತಿದೆ''ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅಲ್ಪಸಂಖ್ಯಾತರ ತುಷ್ಟೀಕರಣ ನೀತಿಯಿಂದ ಹಲವು ಅಹಿತಕರ ಘಟನೆಗಳು ಸಂಭವಿಸುತ್ತಿವೆ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ಯುವಕರ ಶ್ರೇಯೋಭಿವೃದ್ಧಿಗಾಗಿ ಹಾಗೂ ಯುವ ಸಮುದಾಯ ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕುವಂತಾಗಲು ಭವಿಷ್ಯದಲ್ಲಿ ಉತ್ತಮ ಜೀವನವನ್ನು ನಡೆಸುವ ನಿಟ್ಟಿನಲ್ಲಿ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಮುಖಾಂತರ ದುಡಿಯುವ ಕೈಗಳಿಗೆ ಕೌಶಲ್ಯ ತರಬೇತಿ ನೀಡುವ ಕಾರ್ಯವನ್ನು ನಿರಂತರವಾಗಿ ಮೋದಿ ಸರ್ಕಾರ ಮಾಡುತ್ತಿದೆ ಎಂದು ಹೇಳಿದರು.
ಸಮಾಜವನ್ನು ಶುದ್ಧಿ ಮಾಡುವ ಕಾರ್ಯ ಯುವ ಸಮುದಾಯದಿಂದ ಮಾತ್ರ ಸಾಧ್ಯ. ನಮ್ಮ ಸಮಾಜದಲ್ಲಿ ಶೇ.65ರಷ್ಟು ಯುವಕರಿದ್ದಾರೆ. ಸ್ವಾತಂತ್ರ್ಯ ನಂತರ 65 ವರ್ಷದಲ್ಲಿ 700 ವಿವಿಗಳು ಕಾರ್ಯನಿರ್ವಹಿಸುತ್ತಿದ್ದವು. ಆದರೆ ಮೋದಿ ಸರ್ಕಾರ 10 ವರ್ಷದ ಅವಧಿಯಲ್ಲಿ 450 ಹೊಸ ವಿವಿಗಳನ್ನು ಸ್ಥಾಪನೆ ಮಾಡುವ ಮೂಲಕ ಯುವ ಸಮುದಾಯಕ್ಕೆ ಅನುಕೂಲ ಮಾಡಿಕೊಟ್ಟಿದೆ ಎಂದರು.
ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಯಾದರು.

ಬಿಜೆಪಿ ಯುವ ಮೋರ್ಚಾ ತಾಲ್ಲೂಕು ಘಟಕದ ಅಧ್ಯಕ್ಷ ವೀರನಗೌಡ ಅಧ್ಯಕ್ಷತೆ ವಹಿಸಿದ್ದರು.

ಬಿಜೆಪಿ ಮುಖಂಡರಾದ ಟಿ.ಎಸ್. ಮೋಹನ್, ಸಂಕ್ಲಾಪುರ ಹನುಮಂತಪ್ಪ, ಹುಲ್ಮಾರ್ ಮಹೇಶ್, ಎಸ್.ಎಸ್. ರಾಘವೇಂದ್ರ, ಅರುಣ್ ಕುಗ್ವೆ, ಪವನ್ ಸೂಗೂರು, ಆಶೀಕ್, ಧ್ರುವ ಕುಮಾರ್, ಪ್ರಶಾಂತ್ ಸಾಳಂಕೆ, ಆದಿತ್ಯ, ಲೋಹಿತನಾಯ್ಕ, ವಿನಯ್, ಗೋಣಿ ಸಂದೀಪ್, ದುರ್ಗಾವರ್ ಶಿವಕುಮಾರ್, ಮಂಜು ಕಣಿಯ, ಬೋಗಿ ಚೇತನ್, ಡಿ.ಡಿ. ಶಿವಕುಮಾರ್, ಜೆಡಿಎಸ್ ತಾಲ್ಲೂಕು ಘಟಕ ಅಧ್ಯಕ್ಷ ಬೆಂಕಿ ಯೋಗೀಶ್ ಉಪಸ್ಥಿತರಿದ್ದರು.






ಶಿರಾಳಕೊಪ್ಪ ಹತ್ತಿರದ ತೊಗರ್ಸಿ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿ ದರ್ಶನಪಡೆದರು. ಈ ಸಂದರ್ಭದಲ್ಲಿ ಮಹಾಂತ ದೇಶಿಕೇಂದ್ರ ಸ್ವಾಮಿಜಿ ಸನ್ಮಾನಿಸಿ ಗೌರವಿಸಿದರು.

## ಹೊಟ್ಟೆಯಲ್ಲಿದ್ದ 7 ಕೆ.ಜಿ. ತೂಕದ ಗಡ್ಡೆ ತೆಗೆದ ಸರ್ಕಾರಿ ವೈದ್ಯರು

ಸುದ್ದಿಸಂಚಾರಿ | ಸಾಗರ

ಸಾಗರ: ಇಲ್ಲಿನ ಮಹಿಳಾ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಯ ವೈದ್ಯರು ಮಹಿಳೆಯೊಬ್ಬರ ಹೊಟ್ಟೆಯಲ್ಲಿ ಬೆಳೆದಿದ್ದ 7 ಕೆಜಿ ತೂಕದ ಗಡ್ಡೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ಬುಧವಾರ ಯಶಸ್ವಿಯಾಗಿ ಹೊರ ತೆಗೆದಿದ್ದಾರೆ.

ಹೊಸನಗರ ತಾಲ್ಲೂಕಿನ ಜಯನಗರ ಗ್ರಾಮದ ಶಶಿಕಲಾ ಎಂಬುವವರು ಕೆಲ ಸಮಯದಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದು ಈಚೆಗೆ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಪರೀಕ್ಷೆ ನಡೆಸಿದ ವೈದ್ಯರು ಹೊಟ್ಟೆಯಲ್ಲಿ ಗಡ್ಡೆ ಬೆಳೆದಿರುವುದನ್ನು ಗುರುತಿಸಿದ್ದರು.

ಬುಧವಾರ ವೈದ್ಯರಾದ ನಾಗೇಂದ್ರಪ್ಪ, ಪ್ರತಿಮಾ, ಶರ್ಮಿತಾ, ಬಿ.ಜಿ.ಸಂಗಮ್, ರಾಜೇಶ್, ಶುಶ್ರೂಷಕಿಯರಾದ ಸುವರ್ಣ, ಶ್ವೇತಾ, ಆಲಿಯಾ, ಚಂದ್ರು, ರಾಕೇಶ್ ಅವರನ್ನೊಳಗೊಂಡ ತಂಡ 2 ಗಂಟೆಗೂ ಹೆಚ್ಚು ಕಾಲ ಶಸ್ತ್ರ ಚಿಕಿತ್ಸೆ ನಡೆಸಿ ಗಡ್ಡೆಯನ್ನು ಹೊರಕ್ಕೆ ತೆಗೆದಿದೆ. ಶಸ್ತ್ರ ಚಿಕಿತ್ಸೆಯ ನಂತರ ಮಹಿಳೆ ಆರೋಗ್ಯವಾಗಿದ್ದಾರೆ' ಎಂದು ಆಸ್ಪತ್ರೆಯ ಆಡಳಿತಾಧಿಕಾರಿ





Top News ಆನವಟ್ಟಿಯಲ್ಲಿ ಪಕ್ಷೇತರ ಅಭ್ಯರ್ಥಿ ಪ್ರಚಾರ

# ಕಾಂಗ್ರೆಸ್ - ಯಡಿಯೂರಪ್ಪ ಕುಟುಂಬದ ಮೇಲೆ ಈಶ್ವರಪ್ಪ ವಾಗ್ದಾಳಿ

ಸುದ್ದಿ-ಸಂಚಾರಿ
ಆನವಟ್ಟಿ:
ಕಾಂಗ್ರೆಸ್ ಮತ್ತು ಯಡಿಯೂರಪ್ಪ ಮಧ್ಯ ಕೆಟ್ಟ ಹೊಂದಾಣಿಕೆಯಿಂದಾಗಿ, ಶಿವಮೊಗ್ಗ ಕ್ಷೇತ್ರಕ್ಕೆ ಕಾಂಗ್ರೆಸ್‌ನವರು ಡಮ್ಮಿ ಅಭ್ಯರ್ಥಿಯಾಗಿ ಗೀತಾ ಶಿವರಾಜ್‌ಕುಮಾರ್ ಅವರಿಗೆ ಟಿಕೆಟ್ ನೀಡಿದೆ ಎಂದು ಪಕ್ಷೇತರ ಅಭ್ಯರ್ಥಿ ಕೆ.ಎಸ್ ಈಶ್ವರಪ್ಪ ವ್ಯಂಗ್ಯವಾಡಿದರು.

ಮಂಗಳವಾರ ಆನವಟ್ಟಿಯ ವಾಸವಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕರ್ತರ ಹಾಗೂ ಮುಖಂಡರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಅಪ್ಪಟ ಹಿಂದುವಾದಿಗಳನ್ನು ದೂರವಿಟ್ಟು ಕರ್ನಾಟಕದಲ್ಲಿ ಯಡಿಯೂರಪ್ಪ ಕುಟುಂಬ ಅಂದರೆ ಭಾರತೀಯ ಜನತಾ ಪಾರ್ಟಿ ಎನ್ನುವಂತೆ ಆಗಿದೆ. ಆರು ತಿಂಗಳ ಅಂತರದಲ್ಲಿ ಸಿ.ಟಿ ರವಿ, ನಾಗರಾಜ ಗೌಡ, ಮಾಲತೇಶ್ ಗೋಣಿ, ಅವರ ಭವಿಷ್ಯವನ್ನು ತನ್ನ ಮಗನ ಭವಿಷ್ಯಕ್ಕಾಗಿ ಹಾಳು ಮಾಡಿದ್ದಾರೆ. ಮುಂದೆ ವಿಜೇಂದ್ರ ಅವರನ್ನು ಮುಖ್ಯಮಂತ್ರಿ ಮಾಡುವ ಮತ್ತು ರಾಘವೇಂದ್ರ ಅವರನ್ನು ಕೇಂದ್ರಮಂತ್ರಿ ಮಾಡುವ ಆಶಾಭಾವನೆಯಿಂದ ಬಿಜೆಪಿಯಲ್ಲಿರುವ ನಿಷ್ಠಾವಂತ ಹಿಂದುವಾದಿಗಳನ್ನು ಪಕ್ಷದಿಂದ ದೂರವಿಡುವ ಹುನ್ನಾರ ಮಾಡಿದ್ದಾರೆ. ಯಡಿಯೂರಪ್ಪ ಅವರು ಎಲ್ಲೋ ಇದ್ದ ಭಾರತಿ ಶೆಟ್ಟಿ ಅವರನ್ನು ಕರೆತಂದು ಎಂಎಲ್‌ಸಿ ಮಾಡಿದರು. ಶೋಭಾ ಅವರನ್ನು ಸಂಸದೆ ಮಾಡಿದರು. ತನಗೆ ಬೇಕಾದವರನ್ನು ಮಾತ್ರ ಬೆಳೆಸಿದ್ದಾರೆ.ಯಡಿಯೂರಪ್ಪ ಕುಟುಂಬ ರಾಜಕರಣ ಅಂತ್ಯವಾಗಬೇಕು. ಬಿಜೆಪಿ ಶುದ್ದೀಕರಣವಾಗಬೇಕು. ಅದಕ್ಕಾಗಿ ನಾನು ನೇರ ಸ್ಪರ್ಧೆ ಮಾಡಿದ್ದೇನೆ ಎಂದರು.

ಕಳೆದ ಚುನಾವಣೆಯಲ್ಲಿ ಶಿಕಾರಿಪುರದಲ್ಲಿ ವಿಜೇಂದ್ರ ಸೋಲುವ ಹಂತದಲ್ಲಿ ಇದ್ದರು. ಯಡಿಯೂರಪ್ಪ ಕೆಲವು ಗ್ರಾಮಗಳಲ್ಲಿ ಹಣದ ಹೊಳೆ ಹರಿಸಿ, 60 ಸಾವಿರ ಅಂತರ ಲೀಡ್ ಈಗ 10 ಸಾವಿರಕ್ಕೆ ಇಳಿದಿದೆ. ಈ ಲೋಕಸಭಾ ಚುನಾವಣೆಯು ಹಣ ಮತ್ತು ಧರ್ಮದ ಹೋರಾಟ, ರಾಘವೇಂದ್ರ ಗೆಲುವಿಗಾಗಿ ಕೋಟಿ-ಕೋಟಿ ಹಣ ಸುರಿದರು, ಗೆಲುವು ಮಾತ್ರ ನನ್ನದೆ ನಾನು ಧರ್ಮದ ಹಾದಿಯಲ್ಲೇ ಮತಯಾಚನೆ ಮಾಡುತ್ತೇನೆ ಎಂದ ಅವರು ಈಗಾಗಲೇ ಇವರ ಮೇಲೆ ಲಿಂಗಾಯತ ಸಮಾಜ ಕೋಪಗೊಂಡಿದೆ. ಎಲ್ಲಾ ಲಿಂಗಾಯತರು ಯಡಿಯೂರಪ್ಪ ಕುಟುಂಬಕ್ಕೆ ಮತ ಹಾಕ್ತರಾ ಎಂದು ಪ್ರಶ್ನೆ ಮಾಡಿದ ಅವರು ಎಲ್ಲಾ ಈಡಿಗರು ಮಧು ಬಂಗಾರಪ್ಪ ಅವರಿಗೆ ಮತ ಹಾಕುವುದಿಲ್ಲ. ಎಲ್ಲಾ ಜಾತಿ, ಧರ್ಮದಲ್ಲೂ ಹಿಂದುತ್ವ ಬೆಂಬಲಿಸುವವರು ಇದ್ದಾರೆ. ಅವರೇ ನನ್ನನ್ನು ಗೆಲ್ಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಾನೂನು ಹಿಡಿತ ತಪ್ಪಿದೆ ಹಿಂದು ಹೆಣ್ಣು ಮಗಳಾದ ನೇಹಾ ಹತ್ಯೆ, ಕ್ಷಮಿಸಲು ಸಾಧ್ಯವಿಲ್ಲ. ಆರೋಪಿಗೆ ಶಿಕ್ಷೆಯಾಗಬೇಕು. ಹಿಂದು ಹೆಣ್ಣುಮಕ್ಕಳ ರಕ್ಷಣೆ ಆಗಬೇಕು ಎಂದರು.

ಎಪ್ರಿಲ್ 28 ರಂದು ಆನವಟ್ಟಿಯಲ್ಲಿ ಬೃಹತ್ ಬಹಿರಂಗ ಸಭೆಯನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದ ಅವರು ನನ್ನ ಗುರುತು ರೈತನ ಪಕ್ಕದಲ್ಲಿ ಎರಡು ಕಬ್ಬಿನ ಗಿಡಗಳು . ನನಗೆ ಮತ ನೀಡಿ ಎಂದ ಅವರು ಜೈ ನರೇಂದ್ರ ಮೋದಿ,ಜೈ ನರೇಂದ್ರ ಮೋದಿಜಿ ಎಂದು ಘೋಷಣೆ ಕೂಗಿದರು.

ಸಭೆಯಲ್ಲಿ ಮುಖಂಡರಾದ ಪ್ರಭಾಕರ ರಾಯ್ಕರ್, ರಾಮಾನಾಯ್ಕ ಕೋಟಿಪುರ, ಕೇಶವನಾಯ್ಕ, ಚಿದಾನಂದ ಜೇಡಗೇರಿ, ಅಣ್ಣಾಜಿ ಗೌಡ, ವಕೀಲ ಶಿವಪ್ಪ, ಗಂಗೇನಾಯ್ಕ, ಮಂಜಣ್ಣ ಸಾಗರ, ಬೀಮಣ್ಣ, ದುಂದಪ್ಪ, ಗಣಪತಿ, ವಿಶ್ವ, ಶಿವಯೋಗಿ ಇದ್ದರು.

# ಬೈಕ್ ನಿಂದ ಬಿದ್ದು ವ್ಯಕ್ತಿ ಸಾವು

ಸುದ್ದಿ ಸಂಚಾರಿ | ಶಿವಮೊಗ್ಗ

ಶಿವಮೊಗ್ಗದ ದಾಸರಕಲ್ಲಹಳ್ಳಿಯ ನಿವಾಸಿ ನೀಲೇಶ್ ಕೆಎ 14-ಇಪಿ-8708 ಕ್ರಮಸಂಖ್ಯೆಯ ಬೈಕ್ ಚಲಾಯಿಸಿಕೊಂಡು ಹೊಳೆಹೊನ್ನೂರಿಗೆ ಕೂಲಿಕೆಲಸಕ್ಕೆಂದು ಹೋಗುವಾಗ ಬೈಕ್ ನಿಂದ ಬಿದ್ದು ಮೃತಪಟ್ಟಿದ್ದಾರೆ.

ಬೈಕ್ ನಿಂದ ಬಿದ್ದಿದ್ದ ಅವರನ್ನು ಹಿಂದಿನ ಬೈಕ್ ನಲ್ಲಿ ಬರುತ್ತಿದ್ದ ಗ್ರಾಮದ ವಾಸಿಗಳಾದ ವಿರೇಶ ಮತ್ತು ದೇವರಾಜಪ್ಪ ರವರು ಕೂಡಲೇ ಎತ್ತಿ ಉಪಚರಿಸಿ ಹೊಳೆಹೊನ್ನೂರು ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದಾರೆ.

ನಂತರ ಹೊಳೆಹೊನ್ನೂರು ಆಸ್ಪತ್ರೆಯಿಂದ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನೀಲೇಶ್ ಪರಿಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ. ಪ್ರಕರಣ ಹೊಳೆಹೊನ್ನೂರು ಪೊಲೀಸ್ ಠಾಣೆಗೆ ದಾಖಲಿಸಲಾಗಿದೆ.

# ಅಬ್ಬಲಗೆರೆ ಗ್ರಾಪಂ ಕಾರ್ಯದರ್ಶಿ ಲೋಕಾಯುಕ್ತ ಬಲೆಗೆ



ಸುದ್ದಿ-ಸಂಚಾರಿ
ಶಿವಮೊಗ್ಗ: ನಿವೇಶನದ ಖಾತೆ ಮಾಡಿಕೊಡಲು ₹ 15,000 ಲಂಚ ಪಡೆಯುವ ವೇಳೆ ತಾಲ್ಲೂಕಿನ ಅಬ್ಬಲಗೆರೆ ಗ್ರಾಮ ಪಂಚಾಯಿತಿ ಗ್ರೇಡ್–2 ಕಾರ್ಯದರ್ಶಿ ಟಿ.ಯೋಗೇಶ್ ಬುಧವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಶಿವಮೊಗ್ಗದ ನವುಲೆಯ ನಿವಾಸಿ ಬಿ.ಯಶವಂತ ಅವರ ಹೆಸರಲ್ಲಿ ಚನ್ನಮುಂಬಾಪುರದ ಅಕ್ಷರ ಕಾಲೇಜು ಎದುರು 10 ಗುಂಟೆ ಜಾಗ ಇತ್ತು. ಅದರ ಖಾತೆ ಮಾಡಿಸಿಕೊಳ್ಳಲು ಗ್ರಾಮ ಪಂಚಾಯಿತಿಗೆ 6 ತಿಂಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಆದರೆ, ಕೆಲಸ ಆಗಿರಲಿಲ್ಲ. ಕೆಲಸ ಮಾಡಿಕೊಡಲು ಯೋಗೇಶ್ ₹ 15,000 ಲಂಚ ಕೇಳಿದ್ದರು. ಈ ಕುರಿತು ಯಶವಂತ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಯಶವಂತ ಅವರಿಂದ ಲಂಚದ ಹಣ ಪಡೆಯುವಾಗ ದಾಳಿಯ ವೇಳೆ ಯೋಗೇಶ್ ಸಿಕ್ಕಿಬಿದ್ದಿದ್ದು, ಬಂಧಿಸಿ ನ್ಯಾಯಾಂಗ ವಶಕ್ಕೆ ಸಲ್ಲಿಸಲಾಗಿದೆ. ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಕಚೇರಿಯ ಪೊಲೀಸ್ ಅಧೀಕ್ಷಕರಾದ ಶ್ರೀ ಮಂಜುನಾಥ ಚೌದರಿ. ಎಂ.ಹೆಚ್, ಹಾಗೂ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಉಮೇಶ್ ಈಶ್ವರನಾಯ್ಕ ಇವರ ಸೂಕ್ತ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿದ್ದು, ಟ್ರ್ಯಾಪ್ ಕಾಲಕ್ಕೆ ಶಿವಮೊಗ್ಗ ಲೋಕಾಯುಕ್ತ ಕಛೇರಿಯ ಪೊಲೀಸ್ ನಿರೀಕ್ಷಕರಾದ ಶ್ರೀ ವೀರಬಸಪ್ಪ ಎಲ್. ಕುಸಲಾಪುರ, ಶ್ರೀ ಪ್ರಕಾಶ್, ಶ್ರೀ ಹೆಚ್.ಎಸ್.ಸುರೇಶ್ ಮತ್ತು ಸಿಬ್ಬಂದಿಯವರಾದ ಶ್ರೀಯೋಗೇಶ್ ಸಿ.ಹೆಚ್.ಸಿ, ಶ್ರೀ ಸುರೇಂದ್ರ ಹೆಚ್.ಜಿ, ಸಿ.ಹೆಚ್.ಸಿ, ಶ್ರೀ ಪ್ರಶಾಂತ್ ಕುಮಾರ್ ಸಿ.ಪಿ.ಸಿ, ಶ್ರೀ ರಘುನಾಯ್ಕ ಸಿ.ಪಿ.ಸಿ, ಶ್ರೀ ದೇವರಾಜ್ ಸಿಪಿಸಿ, ಶ್ರೀಮತಿ ಪುಟ್ಟಮ್ಮ ಎನ್. ಮಪಿಸಿ, ಶ್ರೀ ಪ್ರದೀಪ್, ಎ.ಪಿ.ಸಿ, ಶ್ರೀ ಗೋಪಿ ವಿ. ಎ.ಪಿ.ಸಿ. ಶ್ರೀ ಜಯಂತ್ ಎ.ಪಿ.ಸಿ. ಇವರುಗಳು ಹಾಜರಿದ್ದು, ಕರ್ತವ್ಯ ನಿರ್ವಹಿಸಿರುತ್ತಾರೆ.



Top News ಸಾಗರ ಬಿಜೆಪಿ ಮುಖಂಡ

# ಸಾಗುವಳಿದಾರರ ಒಕ್ಕಲೆಬ್ಬಿಸುವ ಯತ್ನ: ಕೆ .ಎಸ್ ಪ್ರಶಾಂತ್

ಸಾಗರ: 'ತಾಲ್ಲೂಕಿನ ಭಾರಂಗಿ ಹೋಬಳಿಯಲ್ಲಿ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸಲು ಶಾಸಕ ಗೋಪಾಲಕೃಷ್ಣ ಬೇಳೂರು ಮುಂದಾಗಿದ್ದಾರೆ' ಎಂದು ಬಿಜೆಪಿ ಹಿಂದುಳಿದ ವರ್ಗಗಳ ಜಿಲ್ಲಾ ಘಟಕದ ಪ್ರಭಾರಿ ಕೆ.ಎಸ್.ಪ್ರಶಾಂತ್ ಆರೋಪಿಸಿದ್ದಾರೆ.'ಅರಣ್ಯ ಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಸಂಬಂಧ ಬೇಳೂರು, ರಾಜ್ಯದ ಅರಣ್ಯ ... ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.'ನಾಡಿಗೆ ಬೆಳಕು ನೀಡುವ ಜಲ ವಿದ್ಯುತ್ ಯೋಜನೆಗಾಗಿ ತಮ್ಮ ಜೀವನಕ್ಕೆ ಆಧಾರವಾಗಿದ್ದ ಭೂಮಿಯನ್ನೇ ತ್ಯಾಗ ಮಾಡಿರುವ ಸಾಕಷ್ಟು ಸಂಖ್ಯೆಯ ಜನರು ಭಾರಂಗಿ ಹೋಬಳಿಯಲ್ಲಿ ನೆಲೆಸಿದ್ದಾರೆ. ಅವರ ಹಿತವನ್ನು ಕಾಯುವುದು ಶಾಸಕರಾದವರ ಕರ್ತವ್ಯವಾಗಿದೆ. ಆದರೆ ಅವರನ್ನು ಒಕ್ಕಲೆಬ್ಬಿಸಲು ಹುನ್ನಾರ ನಡೆದಿರುವುದು ... ಅಭಿವೃದ್ಧಿಗೆ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ಬಿಜೆಪಿ ಸರ್ಕಾರವಿದ್ದಾಗ ಬಿಡುಗಡೆಯಾದ ಅನುದಾನದ ಹಣದಿಂದ ಕೆಲವು ಕಾಮಗಾರಿಗಳಿಗೆ ಶಾಸಕ ಬೇಳೂರು ಶಂಕುಸ್ಥಾಪನೆ ಮಾಡಿ ತಮ್ಮ ಸಾಧನೆ ಎಂದು ತಪ್ಪು ಮಾಹಿತಿ ನೀಡುತ್ತಿದ್ದಾರೆ' ಎಂದು ಬಿಜೆಪಿ ಹಿರಿಯ ಮುಖಂಡ ಕೆ.ಎನ್.ಶ್ರೀಧರ್ ದೂರಿದರು.'ಕಳೆದ ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಗೀತಾ ... ಅಭ್ಯರ್ಥಿಯಾಗಿದ್ದಾರೆ. ಹೀಗಾಗಿ ಮತದಾರರು ನಿರಂತರವಾಗಿ ಜನರ ಸಂಪರ್ಕದಲ್ಲಿರುವ ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಪರ ಒಲವು ತೋರುವುದು ಖಚಿತ' ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಜಶೇಖರ್ ಗಾಳಿಪುರ ಹೇಳಿದರು.

ಬಿಜೆಪಿಯ ಪ್ರಮುಖರಾದ ದೇವೇಂದ್ರಪ್ಪ ಯಲಕುಂದ್ಲಿ, ವಿ.ಮಹೇಶ್, ಹು.ಭಾ.ಅಶೋಕ್, ಚಂದ್ರಕಾಂತ್, ರಾಧಿಕಾ ಪೈ ಇದ್ದರು.



**ಆನವಟ್ಟಿ** ಸಮೀಪದ ಹುರುಳಿ ಗ್ರಾಮದಲ್ಲಿರುವ ಆಂಜನೇಯ ದೇವರ ಮಹಾರಥೋತ್ಸವ ಬುಧವಾರ ಅದ್ದೂರಿಯಾಗಿ ನಡೆಯಿತು. ಪಕ್ಕದ ಜಿಲ್ಲೆಗಳಿಂದಲ್ಲೂ ಭಕ್ತರು ಆಗಮಿಸಿದ್ದರು.

## ವಿಟೋ ಅಧಿಕಾರ ದುರ್ಬಳಕೆ: ಭಾರತ ಅಸಮಾಧಾನ

ಸುದ್ದಿಸಂಚಾರಿ | ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನ ಮೂಲದ ಜಾಗತಿಕ ಭಯೋತ್ಪಾದಕರ ಪಟ್ಟಿ ಘೋಷಿಸುವಂತಹ ವಿಷಯಗಳ ಬಗ್ಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕೆಲವು ಸದಸ್ಯರು ಜವಾಬ್ದಾರಿ ವಹಿಸಿಕೊಳ್ಳುತ್ತಿಲ್ಲ ಎಂದು ಭಾರತ ಕಿಡಿಕಾರಿದೆ.

ಪರೋಕ್ಷವಾಗಿ ಚೀನಾ ಧೋರಣೆ ಟೀಕಿಸಿರುವ ಭಾರತ, 'ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕೆಲವು ಸದಸ್ಯ ರಾಷ್ಟ್ರಗಳು ತಮ್ಮ ವಿಟೊ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಭಯೋತ್ಪಾದನೆ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸುವ ಮಹತ್ವದ ಪ್ರಸ್ತಾವನೆಗಳಿಗೂ ತಡೆವೊಡ್ಡುವುದು, ನಿರ್ಬಂಧಿಸುವುದಕ್ಕೆ ವಿಟೊ ಅಧಿಕಾರ ಸೀಮಿತವಾಗಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ (ಯುಎನ್‌ಜಿಎ) ಮಾತನಾಡಿದ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಅವರು, 'ಹೆಚ್ಚುತ್ತಿರುವ ಸವಾಲುಗಳನ್ನು ನಿಭಾಯಿಸುವಲ್ಲಿ ಭದ್ರತಾ ಮಂಡಳಿ ನಿರ್ವಹಿಸುತ್ತಿರುವ ಪಾತ್ರ ಕನಿಷ್ಠ ಮಟ್ಟದಲ್ಲಿದೆ' ಎಂದಿದ್ದಾರೆ.



**ಸನ್ಮಾನ** ಭದ್ರಾವತಿಯಲ್ಲಿ ತಮಿಳುನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಹಾಗೂ ಸಂಸದ ಬಿ.ವೈ.ರಾಘವೇಂದ್ರ ಅವರನ್ನು ಸನ್ಮಾನಿಸಲಾಯಿತು.

**Top News** **ಶಿವಮೊಗ್ಗ ಲೋಕಸಭೆ ಚುನಾವಣ ಕಣದಲ್ಲಿ ಈ ಬಾರಿ 23 ಅಭ್ಯರ್ಥಿಗಳಿದ್ದಾರೆ.**

## ಚುನಾವಣ ಆಯೋಗವು ಅಭ್ಯರ್ಥಿಗಳ ಕ್ರಮ ಸಂಖ್ಯೆ ಮತ್ತು ಚಿಹ್ನೆಯನ್ನು ಫೈನಲ್ ಮಾಡಿ ಪ್ರಕಟಿಸಿದೆ

ಸುದ್ದಿ-ಸಂಚಾರಿ
ಶಿವಮೊಗ್ಗ:

ಕ್ರಮ ಸಂಖ್ಯೆ 1 : ಗೀತಾ ಶಿವರಾಜ್ ಕುಮಾರ್ | ಕಾಂಗ್ರೆಸ್ | ಚಿಹ್ನೆ ಕೈ

ಕ್ರಮ ಸಂಖ್ಯೆ 2 : ಬಿ.ವೈ.ರಾಘವೇಂದ್ರ | ಬಿಜೆಪಿ | ಕಮಲ

ಕ್ರಮ ಸಂಖ್ಯೆ 3 : ಎ.ಡಿ.ಶಿವಪ್ಪ | ಬಹುಜನ ಸಮಾಜ ಪಾರ್ಟಿ | ಆನೆ

ಕ್ರಮ ಸಂಖ್ಯೆ 4 : ಅರುಣ ಕಾನಹಳ್ಳಿ | ಉತ್ತಮ ಪ್ರಜಾಕೀಯ ಪಾರ್ಟಿ | ಆಟೋ ರಿಕ್ಷಾ

ಕ್ರಮ ಸಂಖ್ಯೆ 5 : ಎಸ್.ಕೆ.ಪ್ರಭು | ಕರ್ನಾಟಕ ರಾಷ್ಟ್ರ ಸಮಿತಿ | ಬ್ಯಾಟರಿ ಟಾರ್ಚ್

ಕ್ರಮ ಸಂಖ್ಯೆ 6 : ಮೊಹಮ್ಮದ್ ಯೂಸುಫ್ ಖಾನ್ | ಯಂಗ್‌ಸ್ಟರ್ ಎಂಪವರ್‌ಮೆಂಟ್ ಪಾರ್ಟಿ | ಮೈಕ್

ಕ್ರಮ ಸಂಖ್ಯೆ 7 : ಇಂತಿಯಾಜ್ ಎ.ಅತ್ತಾರ್ | ಟ್ರಕ್

ಕ್ರಮ ಸಂಖ್ಯೆ 8 : ಕೆ.ಎಸ್.ಈಶ್ವರಪ್ಪ | ಕಬ್ಬು ರೈತ

ಕ್ರಮ ಸಂಖ್ಯೆ 9 : ಡಿ.ಎಸ್.ಈಶ್ವರಪ್ಪ | ಉಂಗುರ

ಕ್ರಮ ಸಂಖ್ಯೆ 10 : ಕುಣಜೆ ಮಂಜುನಾಥ ಗೌಡ | ತೆಂಗಿನ ತೋಟ

ಕ್ರಮ ಸಂಖ್ಯೆ 11 : ಗಣೇಶ್ (ಬೆಳ್ಳಿ) | ವಜ್ರ

ಕ್ರಮ ಸಂಖ್ಯೆ 12 : ಚಂದ್ರಶೇಖರ ಹೆಚ್.ಸಿ | ಕೊಳಲು

ಕ್ರಮ ಸಂಖ್ಯೆ 13 : ಜಯದೇವ ಜಿ. | ಮಂಚ

ಕ್ರಮ ಸಂಖ್ಯೆ 14 : ಜಾನ್ ಬೆನ್ನಿ | ದೂರವಾಣಿ

ಕ್ರಮ ಸಂಖ್ಯೆ 15 : ಎನ್.ವಿ.ನವೀನ್ ಕುಮಾರ್ | ಹವಾನಿಯಂತ್ರಕ

ಕ್ರಮ ಸಂಖ್ಯೆ 16 : ಪೂಜಾ ಎನ್.ಅಣ್ಣಯ್ಯ | ಲ್ಯಾಪ್‌ಟಾಪ್

ಕ್ರಮ ಸಂಖ್ಯೆ 17 : ಬಂಡಿ | ಬ್ಯಾಟ್ಸ್‌ಮನ್

ಕ್ರಮ ಸಂಖ್ಯೆ 18 : ರವಿಕುಮಾರ್ | ಕ್ರೇನ್

ಕ್ರಮ ಸಂಖ್ಯೆ 19 : ಶಿವರುದ್ರಯ್ಯ ಸ್ವಾಮಿ | ಗಣಕಯಂತ್ರ

ಕ್ರಮ ಸಂಖ್ಯೆ 20 : ಪಿ.ಶ್ರೀಪತಿ ಭಟ್ | ಬಲೂನ್

ಕ್ರಮ ಸಂಖ್ಯೆ 21 : ಹೆಚ್.ಸುರೇಶ್ ಪೂಜಾರಿ | ಬ್ಯಾಟ್

ಕ್ರಮ ಸಂಖ್ಯೆ 22 : ಸಂದೇಶ್ ಶೆಟ್ಟಿ.ಎ | ಹಲಸಿನ ಹಣ್ಣು

ಕ್ರಮ ಸಂಖ್ಯೆ 23 : ಇ.ಹೆಚ್.ನಾಯಕ | ಏಳು ಕಿರಣಗಳಿರುವ ಪೆನ್ನಿನ ನಿಬ್





## ನಿಧಿ ಆಸೆಗೆ ಬಾಲಕಿ ಕೊಲೆ

ಶಿವಮೊಗ್ಗ: 'ನಿಧಿ ಆಸೆಗಾಗಿ 7 ವರ್ಷದ ಬಾಲಕಿಯನ್ನು ಅಪಹರಿಸಿ ಕೊಲೆ ಮಾಡಿರುವ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸಮಗ್ರ ತನಿಖೆ ನಡೆಸಿ ಆರೋಪಿಯನ್ನು ಪತ್ತೆ ಹಚ್ಚಬೇಕು. ಆತನಿಗೆ ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಮಡಿವಾಳ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಬಾಲಾಜಿ ರಾವ್ ಆಗ್ರಹಿಸಿದರು. ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದ ಮಡಿವಾಳ ಸಮಾಜದ ನಿವಾಸಿ ರಾಘು ಮಡಿವಾಳರ ಪುತ್ರಿ ಕೊಲೆಗೀಡಾಗಿದ್ದಾಳೆ. ಕುಟುಂಬಸ್ಥರಿಗೆ ಆಘಾತ ಉಂಟಾಗಿದೆ. ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಕೃತ್ಯ ಇದಾಗಿದೆ' ಎಂದರು. 'ಬಾಲಕಿಯು ಏ. 19 ರಂದು ಆಟವಾಡಲು ಮನೆಯಿಂದ ಹೊರಗೆ ಹೋದಾಗ ಅಪಹರಿಸಿ ಕೃತ್ಯ ಎಸಗಿದ್ದಾರೆ. ಗ್ರಾಮಸ್ಥರು ಹುಡುಕಿದಾಗ ಶವ ಸಿಕ್ಕಿದೆ. ಕೊಲೆ ಮಾಡಿ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಟ್ಟಿದ್ದಾರೆ. ಹಂತಕರನ್ನು ಬಂಧಿಸುವಂತೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವರಿಗೆ ಮನವಿ ಮಾಡಲಾಗಿದೆ. ಆದರೂ, ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ದೂರಿದರು. 'ಮಡಿವಾಳ ಸಮಾಜದ ಧ್ವನಿಯನ್ನು ಸರ್ಕಾರ ಆಲಿಸಲಿ. ಈ ಘಟನೆಯನ್ನು ಸಿಐಡಿ ತನಿಖೆಗೆ ಒಪ್ಪಿಸಬೇಕು' ಎಂದು ಸಮಾಜದ ಮುಖಂಡ ಜೆ. ಹಿರಣ್ಣಯ್ಯ ಆಗ್ರಹಿಸಿದರು. ಪ್ರಮೋದ್ ಎನ್.ಕೆ., ಮಂಜಪ್ಪ ಎಂ., ಮೈಲಾರಿ, ಮಂಜುನಾಥ್ ಎನ್., ಗುರುಮೂರ್ತಿ ಟಿ.ಎಸ್. ಇದ್ದರು.